# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

**ಸಿ.ಸಿ.ನಂ.584 /2017**

**ದಿನಾಂಕಃ17-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಿ.ಡಬ್ಲ್ಯುಃ4 ಸಿ.ಡಬ್ಲುಃ 3

ಸಾಕ್ಷಿಯ ಹೆಸರು ಃ ನಳಿನ
ತಂದೆಯ ಹೆಸರು ಃ ವಿಶ್ವನಾಥ್
ವಯಸ್ಸು ಃ 50 ವರ್ಷ
ಉದ್ಯೋಗ ಃ ಗೃಹಿಣಿ
ವಾಸ ಃ ಬಾಣೂರು

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ-**

ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಮಹಜರಿಗೆ 2015 ರಲ್ಲಿ ಚಾಸಾ,1 ರವರ ಮನೆಯ ಹತ್ತಿರ ಕಳ್ಳತನದ ಸಂಬಂಧ ಅಂದರೆ ಚಾಸಾ.1 ರವರ ಕೊರಳ ಚೈನ್ ಕಿತ್ತುಕೊಂಡು ಹೋದ ವಿಚಾರವಾಗಿ ಚಾಸಾ.1 ರವರ ಮನೆಯ ಗೇಟಿನ ಒಳಭಾಗದಲ್ಲಿ ಪೋಲೀಸರು ನಿಪಿ-2 ರಂತೆ ಮಹಜರನ್ನು ಮಾಡಿದ್ದಾರೆ. ಚಾಸಾ.1 ಘಟನಾ ಸ್ಥಳವನ್ನು ಪೋಲೀಸರಿಗೆ ತೋರಿಸಿರುತ್ತಾರೆ. 2015 ರಂದು ಕಳ್ಳತನ ಆದ ದಿನಾಂಕ ಒಬ್ಬ ವ್ಯಕ್ತಿ ಮಧ್ಯಾಹ್ನ 3-30 ಗಂಟೆ ಸಂದರ್ಭದಲ್ಲಿ ಚಾಸಾ.1 ರವರ ಕೊರಳ ಚೈನನ್ನು ಕಿತ್ತುಕೊಂಡು ಒಂದು ಬಿಳಿ ಬಣ್ಣದ ಸ್ಕೂಟರ್ ನಲ್ಲಿ ತಪ್ಪಿಸಿಕೊಂಡು ಹೋಗಿರುತ್ತಾನೆ, ಆ ಸಂದರ್ಭದಲ್ಲಿ ನಾನು ನಮ್ಮ ಮನೆಯ ಕಾಂಪೌಂಡಿನಲ್ಲಿ ನಿಂತಿದ್ದೆ.

***(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರಿಗೆ ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಸಸಅ. ರವರಿಂದ ಃ**

ಚಾಸಾ.1 ರವರಿಗೆ ಸೇರಿದ ಸರ ಸುಮಾರು 60 ಗ್ರಾಂ ತೂಕ ಇತ್ತು.

**ಪಾಟೀ ಸವಾಲುಃ ೨ ನೇ ಆರೋಪಿ ಪರ ಶ್ರೀ ಎಸ್.ಎನ್. ವಕೀಲರಿಂದ**

ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ಪೋಲೀಸರು ಹೇಳಿಕೊಟ್ಟಂತೆ ಮತ್ತು ಚಾಸಾ.1 ರವರು ಹೇಳಿ ಕೊಟ್ಟಂತೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಸಂದರ್ಭದಲ್ಲಿ ನಾನು ಗೃಹಿಣಿಯಾಗಿ ಮನೆಯಲ್ಲಿಯೇ ಇದ್ದೆ. ಚಾಸಾ.1 ರವರ ಮಾಹಿತಿ ಮೇರೆಗೆ ಆಕೆಯ ಸರ 60 ಗ್ರಾಂ ಇದೆ ಎಂದು ತಿಳಿದುಕೊಂಡಿರುತ್ತೇನೆ. ನಿಪಿ-2 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ

ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ. ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ.1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ೧ನೇ ಆರೋಪಿ ಪರ ಶ್ರೀ ಸಿಎಲ್.ಡಿ ವಕೀಲರಿಂದ**

ಸ್ಕೂಟರ್ ನಲ್ಲಿ ಬಂದ ವ್ಯಕ್ತಿ ಪೂರ್ವ ದಿಕ್ಕಿನಿಂದ ಬಂದು ನಂತರ ಇಬ್ಬರೂ ಪಶ್ಚಿಮ ದಿಕ್ಕಿಗೆ ಹೋಗಿರುತ್ತಾರೆ. ಸ್ಕೂಟರ್ ಅನ್ನು ಯಾರು ಓಡಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸ್ಕೂಟರ್ ಓಡಿಸುತ್ತಿದ್ದ ವ್ಯಕ್ತಿ ಸ್ಕೂಟರ್ ಅನ್ನು ಚಾಲನೆ ಮಾಡಿಕೊಂಡು ಬಂದು ಚೈನನ್ನು ಕಿತ್ತುಕೊಂಡ ವ್ಯಕ್ತಿ ಚಾಲನೆಯಲ್ಲಿದ್ದ ವ್ಯಕ್ತಿ ಸ್ಕೂಟರಿಗೆ ಜಿಗಿದು ಚಾಲನೆ ಮಾಡಿಕೊಂಡು ಹೋಗಿರುತ್ತಾರೆ. ಆ ಸ್ಕೂಟರ್ ನಲ್ಲಿ ವ್ಯಕ್ತಿಗಳು ಬಂದಿದ್ದು ಹಾಗೂ ಹೋಗಿದ್ದು ಎರಡನ್ನೂ ನಾನು ನೋಡಿರುತ್ತೇನೆ. ಸ್ಕೂಟರ್ ಅತಿವೇಗವಾಗಿ ಬಂದಿರುತ್ತದೆ. ಚಾಸಾ.1 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ.1 ರವರ ಪರಿಚಯ ನನಗೆ 4-5 ವರ್ಷಗಳಿಂದ ಇರುತ್ತದೆ. ಸಾಕ್ಷಿ ಮುಂದುವರೆದು ಚಾಸಾ,1 ರವರ ತವರು ಮನೆ ಮತ್ತು ನನ್ನ ತವರು ಮನೆ ಒಂದೇ ಗಾರಮ ಆಗಿರುವುದರಿಂದ ಚಾಸಾ.1 ರವರ ಪರಿಚಯ ನನಗೆ ಮೊದಲಿನಿಂದಲೂ ಇದೆ ಎನ್ನುತ್ತಾರೆ. ಚಾಸಾ.5 ಮತ್ತು ಚಾಸಾ.1 ಅಕ್ಕತಂಗಿಯರು ಎಂದರೆ ಸರಿ.

ನಾನು ನನ್ನ ಮನೆಯ ಹತ್ತಿರ ಘಟನೆ ಆದಾಗ ಒಬ್ಬಳೇ ನಿಂತಿದ್ದೆ. ನನ್ನ ಮನೆಯ ಪಕ್ಕದಲ್ಲಿ ರಾಜು ವಕೀಲರ ಮನೆ, ತದನಂತರ ಚಾಸಾ.1 ರವರ ಮನೆ ಇದೆ. ರಾಜು ವಕೀಲರ ಮನೆ ಡ್ಯುಪ್ಲೆಕ್ಸ್ ಮನೆ ಎಂದರೆ ಸರಿ. ನಮ್ಮ ಮನೆಯ ಕಾಂಪೌಂಡಿನಿಂದ ಚಾಸಾ.1 ರವರ ಮನೆಯ ಕಾಂಪೌಂಡ್ ಕಾಣುವುದಿಲ್ಲ ಎಂದರೆ ಸರಿ. ನಮ್ಮ ಮನೆಯ ಕಾಂಪೌಂಡ್ ಮುಂದೆ ನಿಂತರೆ ಗ್ಯಾಸ್ ಅಂಗಡಿಯವರೆಗೆ ಇರುವ ರಸ್ತೆ ಕಾಣುತ್ತದೆ. ನಾನು ಯಾವುದೇ ಘಟನೆಯನ್ನು ನೋಡದೇ ಇದ್ದರೂ ಚಾಸಾ.1, 2 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ. ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ.1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

( ಸಿ.ಎನ್.ಚಂದನ್ )
ಪ್ರಃಪ್ರಃದಃನ್ಯಾಃದಂ.,ರವರು,
ಕಡೂರು.